MAY 30, 2024

# ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಭೀಕರ ಬರಗಾಲವೇ, ಬಿತ್ತನೆ ಬೀಜಗಳ ದರ ಏರಿಕೆಗೆ ಕಾರಣ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಕ್ಕಳ ಸರ್ವಾಂಗೀಣ ಬೆಳವಣಿಗೆಗಾಗಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ – ಡಾಕ್ಟರ್ ಸಿ.ಎನ್. ಅಶ್ವತ್ಥ ನಾರಾಯಣ.
- ಹೆಣ್ಣು ಭ್ರೂಣ ಪತ್ತೆ – ಹತ್ಯೆ; ಮುಖ್ಯಮಂತ್ರಿ ಕಠಿಣ ಕ್ರಮಕ್ಕೆ ಮುಂದಾಗಲಿ – ಆರ್.ಅಶೋಕ ಆಗ್ರಹ.
- ಗಣಿಗಾರಿಕೆ ಕ್ಷೇತ್ರದಲ್ಲಿ, ಕರ್ನಾಟಕದಿಂದ ಶೇಕಡ 25 ರಷ್ಟು ಕೊಡುಗೆ – ಶಾಲಿನಿ ರಜನೀಶ್.

<><><>

ಈಗ ವಾರ್ತೆಗಳ ವಿವರ

<><><>

ಭೀಕರ ಬರಗಾಲದ ಹಿನ್ನೆಲೆ, ಬೀಜೋತ್ಪಾದನೆಯಲ್ಲಿ ತೀವ್ರ ಕುಸಿತ ಕಂಡಿದ್ದು, ಬಿತ್ತನೆ ಬೀಜಗಳ ದರದಲ್ಲಿ ಗಣನೀಯ ಏರಿಕೆಯಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ; ಇಡೀ ದೇಶಾದ್ಯಂತ ಬಿತ್ತನೆ ಬೀಜಗಳ ದರದಲ್ಲಿ ಏರಿಕೆಯಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ರಾಜ್ಯದಲ್ಲಿ ಬೀಜ ದರ ಸಾಕಷ್ಟು ಕಡಿಮೆಯಿದೆ. ರೈತರು ತಮ್ಮ ಜಮೀನಿನಲ್ಲಿಯೇ ಬೀಜಗಳನ್ನು ಉತ್ಪಾದಿಸುತ್ತಿದ್ದು, ಕರ್ನಾಟಕ ರಾಜ್ಯ ಬೀಜ ನಿಗಮ, ಕರ್ನಾಟಕ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ಹಾಗೂ ಖಾಸಗಿ ಸಂಸ್ಥೆಗಳು ಖರೀದಿಸಿ ಸರಬರಾಜು ಮಾಡುತ್ತಿವೆ ಎಂದು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಮುಖ್ಯಮಂತ್ರಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ, ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಣೆಯಲ್ಲಿ, ಅನಗತ್ಯ ವಿಳಂಬ ಮತ್ತು ಲೋಪವಾಗದಂತೆ, ಮುನ್ನೆಚ್ಚರಿಕೆ ವಹಿಸುವಂತೆ, ನಿರ್ದೇಶನ ನೀಡಿದ್ದಾರೆ.

<><><>

ಬರದಿಂದ ಬೆಂದು, ಇದೀಗ ಮುಂಗಾರು ಬಿತ್ತನೆಗೆ ಸಜ್ಜಾಗುತ್ತಿರುವ ರೈತರಿಗೆ, ಬಿತ್ತನೆ ಬೀಜಗಳ ದರ ಏರಿಸಿ, ದಿನಕ್ಕೊಂದು ಬೆಲೆ ಏರಿಕೆಯ ಬರೆ ಎಳೆಯಲು, ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ವಾರಂಟಿ ಇಲ್ಲದ ಗ್ಯಾರಂಟಿ ನೀಡುವಲ್ಲಿಯೂ ಸರ್ಕಾರ ವಿಫಲವಾಗಿ, ದರ ಏರಿಕೆ ಮೂಲಕ, ಶ್ರೀ ಸಾಮಾನ್ಯರನ್ನು ಮಾತ್ರವಲ್ಲ, ಅನ್ನದಾತರನ್ನೂ ಸಂಕಷ್ಟಕ್ಕೆ ನೂಕಿದೆ, ಎಂದಿದ್ದಾರೆ.

<><><>

ಬಿತ್ತನೆ ಬೀಜಗಳ ದರ ಹೆಚ್ಚಿಸಿರುವುದನ್ನು ವಿರೋಧಿಸಿ, ದಾವಣಗೆರೆ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು, ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಎದುರು, ಪ್ರತಿಭಟನೆ ನಡೆಸಿದರು. ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಸೇರಿದಂತೆ ನೂರಕ್ಕೂ ಅಧಿಕ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿ, ಕಳೆದ ವರ್ಷದ ಬಿತ್ತನೆ ಬೀಜಗಳ ದರವನ್ನೇ ಮುಂದುವರೆಸುವಂತೆ ಆಗ್ರಹಿಸಿದರು.

<><><>

24 ವರ್ಷಗಳ ಹಿಂದೆ, ಕೇವಲ 10 ರೂಪಾಯಿ ದಿನಗೂಲಿಗೆ ದುಡಿಯುತ್ತಿದ್ದ, ಕೃಷಿ ಕೂಲಿ ಕಾರ್ಮಿಕ ಮಹಿಳೆಯರು, ಇಂದು ಅರ್ಧ ಎಕರೆ ಜಮೀನನ್ನು ತೋರುವತ್ತಿಗೆ ಪಡೆದು, 77 ರಾಗಿ ತಳಿಗಳನ್ನು ಉಳಿಸಿ, ಬೆಳೆಸುತ್ತಿದ್ದಾರೆ. ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು ಮತ್ತಿಗಟ್ಟಿಯ, ವಿನಾಯಕ ಸ್ತ್ರೀ ಶಕ್ತಿ ಸಂಘ, ಹಲವಾರು ಅಡ್ಡಿ ಆತಂಕಗಳನ್ನು ದಾಟಿ ಬಂದು, ಸಿರಿಧಾನ್ಯಗಳ ಜೊತೆಗೆ, ರಾಗಿ ತಳಿಗಳ ಬೀಜ ಸಂಗ್ರಹಿಸಿ, ಬೆಳೆಸುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿನಾಯಕ ಸ್ತ್ರೀ ಶಕ್ತಿ ಸಂಘದ ಸಂಚಾಲಕಿ ರತ್ನಾ ಹೊಸಳ್ಳಿ.

<><><>

ರತ್ನಾ ಹೊಸಳ್ಳಿ ಧ್ವನಿ 45 ಸೆಕೆಂದುಗಳು

<><><>

ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು, ಕೇಂದ್ರ ಸರ್ಕಾರ ಜಾರಿ ಮಾಡಿದೆ. ಆದರೆ ರಾಜಕೀಯ ಕಾರಣಗಳಿಗಾಗಿ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸುತ್ತಿದೆ ಎಂದು ಬಿಜೆಪಿ ನಾಯಕ ಡಾಕ್ಟರ್ ಸಿ.ಎನ್. ಅಶ್ವತ್ಥನಾರಾಯಣ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುಣಮಟ್ಟದ ಶಿಕ್ಷಣ, ಕೌಶಲಾಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ಉದ್ಯೋಗದಾತರನ್ನು ಸೃಷ್ಟಿಸುವುದು, ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿ ಎಂದರು.

<><><>

ರಾಜ್ಯದಲ್ಲಿ ಭ್ರೂಣ ಪತ್ತೆ ಮತ್ತು ಹತ್ಯೆಯ ದಂಧೆ, ಹೆಣ್ಣು ಕಂದಮ್ಮಗಳ ಪ್ರಾಣ ಕಸಿದುಕೊಳ್ಳುವ ಜೊತೆಗೆ, ರಹಸ್ಯ ಗರ್ಭಪಾತ ಮಾಡಿಸಿಕೊಳ್ಳುವ ಮಹಿಳೆಯರನ್ನೂ ಅಪಾಯಕ್ಕೆ ದೂಡಿ, ಜೀವ ತೆಗೆಯುತ್ತಿದೆ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ದೂರಿದ್ದಾರೆ. ಪ್ರಕರಣದ ತನಿಖೆಗೆ ಎಸ್.ಐ.ಟಿ ರಚಿಸಿ, ತ್ವರಿತ ವಿಚಾರಣೆಗಾಗಿ ವಿಶೇ ’ ನ್ಯಾಯಾಲಯ ಸ್ಥಾಪಿಸುವಂತೆ, ಕಳೆದ ವ ’ರ್ ಬೆಳಗಾವಿ ಅಧಿವೇಶನದಲ್ಲಿ ತಾವು ಒತ್ತಾಯಿಸಿದ್ದಾಗಿ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಕಠಿಣ ಕ್ರಮಕ್ಕೆ ಮುಂದಾಗುವಂತೆ, ಒತ್ತಾಯಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಚಾಮರಾಜನಗರ, ರಾಮನಗರ, ತುಮಕೂರು, ಬಾಗಲಕೋಟೆ ಸೇರಿದಂತೆ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ವಿಶಿ ್ಟ ಪ್ರಕಾರದ ಗ್ರಾನೈಟ್ ಕಲ್ಲು ದೊರೆಯುತ್ತಿದ್ದು, ದೇಶದ ಜಿ.ಡಿ.ಪಿ.ಗೆ ಗಣನೀಯ ಕೊಡುಗೆ ಸಲ್ಲುತ್ತಿದೆ ಎಂದು, ಅಪರ ಮುಖ್ಯ ಕಾರ್ಯದರ್ಶಿ ಡಾಕ್ಟರ್ ಶಾಲಿನಿ ರಜನೀಶ್, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಜರುಗಿದ, 'ಗ್ರಾನೈಟ್, ಮಾರ್ಬಲ್ ಹಾಗೂ ಗಣಿ' ಕುರಿತ ಕಾರ್ಯಾಗಾರದಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು. ಗಣಿಗಾರಿಕೆ ಕ್ಷೇತ್ರದಲ್ಲಿ ಕರ್ನಾಟಕ ಶೇಕಡ 25ರ ್ಟು ಕೊಡುಗೆ ನೀಡುತ್ತಿದೆ. ರಾಜ್ಯದಲ್ಲಿ 3 ಸಾವಿರದ 362 ಎಕರೆ ಪ್ರದೇಶದಲ್ಲಿ, ಪ್ರಸ್ತುತ 250 ಯೂನಿಟ್ ಗ್ರಾನೈಟ್ ಉತ್ಪಾದನೆ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ ತಡೆಗೆ ಡ್ರೋನ್ ಸೇರಿದಂತೆ, ಆಧುನಿಕ ತಂತ್ರಜ್ಞಾನ ಬಳಸಲಾಗುತ್ತಿದೆ ಎಂದರು.

<><><>

ಕಲ್ಯಾಣ ಚಾಲುಕ್ಯರು ಹಾಗೂ ವಿಜಯನಗರ ಅರಸರ ಆಳ್ವಿಕೆಯ ಕಾಲದ ನೀರಾವರಿ ಕೃಷಿ ಪದ್ಧತಿ ಕುರಿತು, ಅಧಿಕೃತ ಮಾಹಿತಿ ನೀಡಬಲ್ಲ, ಐತಿಹಾಸಕ ಮಹತ್ವದ ಶಿಲಾಶಾಸನ, ಕೊಪ್ಪಳ ಜಿಲ್ಲೆ ಹೊಳೆ ಮುದ್ಲಾಪುರದ, ಹುಲಿಗಿಕಟ್ಟೆ ಬಳಿ ಪತ್ತೆಯಾಗಿದೆ. 14 ಅಡಿ ಉದ್ದ 3 ಅಡಿ ಅಗಲದ, 6 ಸಾಲಿನ ಕನ್ನಡ ಶಿಲಾಶಾಸನ, ತುಂಗಭದ್ರಾ ನದಿ ಕಾಲುವೆಯ ಆಧುನೀಕರಣ ಕಾಮಗಾರಿಯ ವೇಳೆ, ಬೆಳಕಿಗೆ ಬಂದಿದೆ. ಕಮಲಾಪುರ–ಹಂಪಿ ವ್ಯಾಪ್ತಿಯ, ರಾಜ್ಯ ಪುರಾತತ್ವ ಇಲಾಖೆಯ ಉಪ ನಿರ್ದೇಶಕ ಡಾಕ್ಟರ್ ಆರ್.ಶೇಜೇಶ್ವರ ಹಾಗೂ ಪುರಾತತ್ವ ಸಹಾಯಕ ಡಾಕ್ಟರ್ ಮಂಜ ನಾಯ್ಕ, ಕ್ಷೇತ್ರ ಕಾರ್ಯ ಕೈಗೊಂಡಾಗ, ವಿಜಯನಗರ ಅರಸರ ಕಾಲದ ಶಾಸನವೆಂಬುದು ದೃಢಪಟ್ಟಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಇತಿಹಾಸ ಪ್ರಾಧ್ಯಾಪಕ ಡಾಕ್ಟರ್ ಶರಣಬಸಪ್ಪ ಕೋಲ್ಕಾರ.

<><><>

ಡಾ. ಶರಣಬಸಪ್ಪ ಕೋಲ್ಕಾರ್ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ಕೆಲ ಜಿಲ್ಲೆ ಹಾಗೂ ತಾಲೂಕುಗಳಲ್ಲಿ, ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ, ಪದವಿ ಪೂರ್ವ ಕಾಲೇಜುಗಳಲ್ಲಿ, ಪ್ರತಿ ವರ್ಗಕ್ಕೆ 20 ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸುವಂತೆ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಒತ್ತಾಯಿಸಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಅನುಮತಿ ನೀಡುವಂತೆ, ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶಕುಮಾರ ಸಿಂಗ್ ಅವರಿಗೆ, ಪತ್ರ ಬರೆದಿದ್ದಾರೆ.

<><><>

ರಾಷ್ಟ್ರೀಯ 'ಟೆಲಿ ಮಾನಸ' ಆರೋಗ್ಯ ಕಾರ್ಯಕ್ರಮದಡಿ, ಉಚಿತ ಸಹಾಯವಾಣಿ ಮೂಲಕ, 10 ಲಕ್ಷಕ್ಕೂ ಅಧಿಕ ಕರೆಗಳನ್ನು ಸ್ವೀಕರಿಸಿ, ಆರೋಗ್ಯ ಇಲಾಖೆ ಸ್ಪಂದಿಸಿದೆ. ಪ್ರತಿ ದಿನ, 51 ಟೆಲಿ ಮಾನಸ್ ಘಟಕಗಳು, ಮೂರೂವರೆ ಸಾವಿರಕ್ಕಿಂತ ಹೆಚ್ಚು ಮಾನಸಿಕ ಆರೋಗ್ಯ ಮತ್ತು ಆಪ್ತ ಸಮಾಲೋಚನೆ ಸಂಬಂಧಿಸಿದ ಕರೆಗಳನ್ನು ಸ್ವೀಕರಿಸಿ, ಪರಿಹರಿಸಿರುವುದು ವಿಶೇಷ ಮೈಲುಗಲ್ಲಾಗಿದೆ.

<><><>

ಜನ ವಸತಿ ಪ್ರದೇಶಗಳಲ್ಲಿ, ಹಾವುಗಳ ರಕ್ಷಣೆ ಮಾಡುವ ಸ್ವಯಂಸೇವಕರಿಗೆ, ಬಳ್ಳಾರಿಯ ಉಪ ವಲಯ ಅರಣ್ಯಾಧಿಕಾರಿಗಳ

ಕಚೇರಿ ಸಭಾಂಗಣದಲ್ಲಿ, ತರಬೇತಿ ಕಾರ್ಯಾಗಾರ ನಡೆಯಿತು. ಅರಣ್ಯ ಸಂರಕ್ಷಣಾಧಿಕಾರಿ ಕೆ.ಚಂದ್ರಶೇಖರ್ ನಾಯಕ ಕಾರ್ಯಾಗಾರ ಉದ್ಘಾಟಿಸಿ, ಸೂಕ್ತ ತರಬೇತಿ ಇಲ್ಲದೇ ಹಾವುಗಳ ರಕ್ಷಣೆ ಅಪಾಯಕಾರಿ. ಕಾನೂನು ಪ್ರಕಾರ ಕ್ರಮ ಅನಿವಾರ್ಯ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ, ಪ್ರಜ್ವಲ್ ರೇವಣ್ಣ, ಇಂದು ವಿದೇಶದಿಂದ ಬೆಂಗಳೂರಿಗೆ ಆಗಮಿಸುವ ಸಾಧ್ಯತೆ ಇದೆ ಎಂದು, ಸುದ್ದಿ ಸಂಸ್ಥೆ ವರದಿ ಮಾಡಿದೆ.

<><><>

ನೀರು ನಾಯಿ 'ಆಟರ್ಸ್' ವಿಶ್ವ ದಿನವನ್ನು, ಅರಣ್ಯ ಇಲಾಖೆ ಆಚರಿಸಿತು.

<><><>

ಲೋಕಸಭೆಯ 7ನೇ ಹಾಗೂ ಅಂತಿಮ ಹಂತದ ಚುನಾವಣೆಯ, ಬಹಿರಂಗ ಪ್ರಚಾರಕ್ಕೆ ಇಂದು ಸಂಜೆ ತೆರೆ ಬೀಳಲಿದೆ.

<><><>

ಇಂಜಿನಿಯರಿಂಗ್ ಕೋರ್ಸ್‌ಗಳ, ಲ್ಯಾಟರಲ್ ಎಂಟ್ರಿ ಪ್ರವೇಶಾತಿ DCET-24ಕ್ಕೆ ಶುಲ್ಕ ಪಾವತಿಸಲು, ಡಿಪ್ಲೊಮಾ ವಿದ್ಯಾರ್ಥಿಗಳಿಗೆ, ನಾಳೆ ವರೆಗೆ ಅವಕಾಶವಿದೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡ ಬಳ್ಳಾಪುರದಲ್ಲಿ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ಸ್ವಸಹಾಯ ಮಹಿಳಾ ಸಂಘಗಳ ಸದಸ್ಯರಿಗೆ, ನರ್ಸರಿ ಅಭಿವೃದ್ಧಿ ಕುರಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಭೀಕರ ಬರಗಾಲವೇ, ಬಿತ್ತನೆ ಬೀಜಗಳ ದರ ಏರಿಕೆಗೆ ಕಾರಣ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಕ್ಕಳ ಸರ್ವಾಂಗೀಣ ಬೆಳವಣಿಗೆಗಾಗಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ – ಡಾಕ್ಟರ್ ಸಿ.ಎನ್. ಅಶ್ವತ್ಥ ನಾರಾಯಣ.
- ಹೆಣ್ಣು ಭ್ರೂಣ ಪತ್ತೆ – ಹತ್ಯೆ; ಮುಖ್ಯಮಂತ್ರಿ ಕಠಿಣ ಕ್ರಮಕ್ಕೆ ಮುಂದಾಗಲಿ – ಆರ್.ಅಶೋಕ ಆಗ್ರಹ.
- ಗಣಿಗಾರಿಕೆ ಕ್ಷೇತ್ರದಲ್ಲಿ, ಕರ್ನಾಟಕದಿಂದ ಶೇಕಡ 25 ರಷ್ಟು ಕೊಡುಗೆ – ಶಾಲಿನಿ ರಜನೀಶ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>